ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 73 ಗ್ರಾಪಂಕಾ 2020 (ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:13.07.2020

**ಸುತ್ತೋಲೆ**

**ವಿಷಯ:** ಕೋವಿಡ್-19 (ಕೊರೊನಾ ವೈರಸ್) ವ್ಯಾಪಕವಾಗಿ ಹರಡದಂತೆ ಹಾಗೂ ಈ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಬಹುದಾದ ದುರ್ಬಲ ವರ್ಗದವರನ್ನು (Vulnerable Group), ಹೋಂ ಕ್ವಾರೈಂಟೈನ್ ಮತ್ತು ಸೋಂಕಿತರನ್ನು ಮನೆಯಲ್ಲಿ ಪ್ರತ್ಯೇಕವಾಗಿರಿಸಿರುವ ಬಗ್ಗೆ ನಿಗಾವಹಿಸಲು ರಚಿಸಲಾದ ಗ್ರಾಮ ಪಂಚಾಯಿತಿ ಹೆಲ್ಪ್‌ಡೆಸ್ಕ್‌ಗಳು ಇನ್ನು ಮುಂದೆ ಸಮುದಾಯ ಸಹಾಯವಾಣಿ (GP Call Center) ಗಳಾಗಿ ಕಾರ್ಯನಿರ್ವಹಿಸುವ ಕುರಿತು

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 73 ಗ್ರಾಪಂಕಾ 2020 ದಿ:08-06-2020.
2. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 73 ಗ್ರಾಪಂಕಾ 2020 (ಭಾಗ-2) ದಿನಾಂಕ:06-07-2020.
3. ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 73 ಗ್ರಾಪಂಕಾ 2020(1) ದಿನಾಂಕ: 07-07-2020

****

ಉಲ್ಲೇಖ (1) ರಲ್ಲಿ ಗ್ರಾಮೀಣ ಪ್ರದೇಶಗಳಿಗೆ ಮರುಳುವ ವ್ಯಕ್ತಿಗಳನ್ನು ಆರೋಗ್ಯ ಇಲಾಖೆ ನೀಡುವ ಪ್ರಮಾಣಿತ ಕಾರ್ಯಚರಣೆ ವಿಧಾನ (ಎಸ್.ಒ.ಪಿ) ಆಧಾರದ ಮೇಲೆ ಇನ್‌ಸ್ಟಿಟ್ಯೂಷನಲ್/ ಹೋಮ್ ಕ್ವಾರೆಂಟೈನ್‌ಗಳಲ್ಲಿ ಇರಿಸಲಾಗುವ ವ್ಯಕ್ತಿಗಳನ್ನು ಗ್ರಾಮ ಪಂಚಾಯತಿಗಳು ಕಾರ್ಯಪಡೆ ಹಾಗೂ ಹೆಲ್ಪ್‌ಡೆಸ್ಕ್‌ಗಳ ಮೂಲಕ ಮೇಲ್ವಿಚಾರಣೆ ಮಾಡಲು ಮತ್ತು ಈ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಬಹುದಾದ ದುರ್ಬಲ ವರ್ಗದವರನ್ನು (Vulnerable Group) ಗುರುತಿಸಿ ಅವರಲ್ಲಿ ಕೋವಿಡ್-19 ಹರಡಂತೆ ನಿಗಾವಹಿಸಲು ತಿಳಿಸಲಾಗಿತ್ತು. ಉಲ್ಲೇಖ (2)ರಲ್ಲಿ ಈಗಾಗಲೇ ಆರೋಗ್ಯ ಇಲಾಖೆಯಿಂದ ಪ್ರತಿ ಗ್ರಾಮಗಳ ದುರ್ಬಲ ವರ್ಗದವರ (Vulnerable Group) ಸಮೀಕ್ಷೆಯನ್ನು ಮಾಡಿ ಕ್ರೋಢಿಕರಿಸಿದ ವಿವರಗಳನ್ನು (Master Data) ಆಯಾ ಗ್ರಾಮ ಪಂಚಾಯತಿ ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಂದ ಆಯಾ ಗ್ರಾಮ ಪಂಚಾಯತಿಗಳು ಪಡೆದು ಗ್ರಾಮ ಪಂಚಾಯತಿಯ ಸಹಾಯಕೇಂದ್ರದ (HelpDesk) ಮೂಲಕ ಪ್ರತಿ ದಿನ ದುರ್ಬಲ ವರ್ಗದ (Vulnerable Group) ವ್ಯಕ್ತಿಗಳಿಗೆ ಕರೆ ಮಾಡಿ ಅವರ ಆರೋಗ್ಯ ಸ್ಥಿತಿಗತಿ ಹಾಗೂ ಇತರೆ ಅಗತ್ಯಗಳ ಕುರಿತು ಮಾಹಿತಿ ಪಡೆದು ದಾಖಲಿಸಿ ಅವರ ಅಗತ್ಯಗಳನ್ನು ಪೂರೈಸುವುದರ ಮೂಲಕ ದುರ್ಬಲ ವರ್ಗದ (Vulnerable Group) ಜನರಿಗೆ ಕೊವಿಡ್-19 ಹರಡಂತೆ ಕ್ರಮಕೈಗೊಳ್ಳಬೇಕು ಎಂದು ಸಹ ತಿಳಿಸಲಾಗಿತ್ತು.

Scanned with CamScanner

ಈ ಹಿನ್ನಲೆಯಲ್ಲಿ ತಾವುಗಳು ಸಕ್ರಿಯವಾಗಿ ತೊಡಗಿಸಿಕೊಂಡು ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ. ಕೋವಿಡ್-19 ಹರಡುವಿಕೆಯ ಹಿನ್ನಲೆಯಲ್ಲಿ ಗ್ರಾಮ ಪಂಚಾಯತಿಗಳು ಸಾಕಷ್ಟು ಪೂರ್ವಸಿದ್ಧತೆಯಿಂದ ಇನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಪ್ರಮುಖವಾಗಿ ಸಮುದಾಯಕ್ಕೆ ಸರಿಯಾದ ತಿಳುವಳಿಕೆ ನೀಡುವುದು, ತಪ್ಪು ಮಾಹಿತಿಗಳಿಂದ ಉಂಟಾಗುತ್ತಿರುವ ಭಯವನ್ನು ಹೋಗಲಾಡಿಸುವುದು ಮತ್ತು ತಡೆಗಟ್ಟಲು ಸಂಬಂಧಿಸಿದಂತೆ ದುರ್ಬಲ ವರ್ಗದವರ ಹಾಗೂ ಕೊರೋನ ಹೊಂದಿದ ರೋಗಿಗಳ ನಿಗಾ ಮತ್ತು ನಿರಂತರ ಮೇಲ್ವಿಚಾರಣೆ ಪ್ರಸ್ತುತ ಸನ್ನಿವೇಶದ ಪ್ರಮುಖ ಕಾರ್ಯವಾಗಿರುತ್ತದೆ. ಕಾರಣ ಪ್ರತಿ ಗ್ರಾಮ ಪಂಚಾಯತಿಗಳು ಈ ಹಿಂದೆ ನೀಡಲಾದ ಸುತ್ತೋಲೆಗಳಲ್ಲಿನ ಎಲ್ಲಾ ಜವಬ್ದಾರಿಗಳನ್ನು ಮುಂದುವರಿಸುತ್ತಾ, ಈ ಕೆಳಕಂಡ ಜವಾಬ್ದಾರಿಗಳನ್ನು ಸಹ ತಪ್ಪದೇ ನಿರ್ವಹಿಸತಕ್ಕದ್ದು.

1. ಈಗಾಗಲೇ ರಚಿಸಲಾದ (ರಚಿಸದಿದ್ದಲ್ಲಿ ತಕ್ಷಣವೇ ರಚಿಸತಕ್ಕದ್ದು) ಸಹಾಯ ಕೇಂದ್ರಗಳು (Help Desk) ಇನ್ನು ಮುಂದೆ ಗ್ರಾಮ ಪಂಚಾಯತಿ ಸಮುದಾಯ ಸಹಾಯವಾಣಿಗಳಾಗಿ (GP Call Center) ಕಾರ್ಯನಿರ್ವಹಿಸಬೇಕು. ಕಾಲ್ ಸೆಂಟರ್ (GP Call Center)ನಿಂದ ಪ್ರತಿ ದಿನ ಉಲ್ಲೇಖಿತ ಪತ್ರ (1) ಮತ್ತು (2) ರಲ್ಲಿ ತಿಳಿಸಿರುವಂತೆ ಪಟ್ಟಿ ಮಾಡಲಾದ ದುರ್ಬಲ ವರ್ಗದವರು, ಹೋಮ್ ಕ್ವಾರೈಂಟೈನ್‌ನಲ್ಲಿ ಇರುವವರು, ಕೊವಿಡ್-19 ಪಾಸಿಟಿವ್ ಬಂದು ಅವರ ಮನೆಯಲ್ಲಿಯೇ ಐಸೋಲೇಷನ್‌ನಲ್ಲಿರುವವರು, ಈ ಎಲ್ಲಾ ವ್ಯಕ್ತಿಗಳಿಗೆ ಕಡ್ಡಾಯವಾಗಿ ಕರೆ ಮಾಡಿ ಅವರ ಆರೋಗ್ಯ ಮತ್ತು ಇತರೆ ಅಗತ್ಯತೆ ಕುರಿತು ಮಾಹಿತಿ ಪಡೆಯುವುದು ಮತ್ತು ಕೂಡಲೇ ಅಗತ್ಯತೆಗೆ ಸ್ಪಂದಿಸುವುದು ಹಾಗೂ ಅವರಲ್ಲಿ ಕೊರೋನಾ ಬಗ್ಗೆ ಇರುವ ಭಯ ಆತಂಕವನ್ನು ಕಡಿಮೆ ಮಾಡುವುದು. ಪ್ರತಿ ದಿನ ಹೀಗೆ ಮಾಡುವುದರಿಂದ ಅವರಲ್ಲಿ ಆತ್ಮಸ್ಥೈರ್ಯ ಹೆಚ್ಚುತ್ತದೆ ಮತ್ತು ಸರ್ಕಾರ ತಮಗೆ ಬೆಂಬಲವಾಗಿದೆ ಎಂಬ ಭರವಸೆ ಮೂಡುತ್ತದೆ.
2. ಗ್ರಾಮದಲ್ಲಿ ಪ್ರತಿಯೊಬ್ಬರು ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದು ಹಾಗೂ ಆಗಾಗ ಕೈಗಳನ್ನು ತೊಳೆಯುವುದು (ಸ್ಯಾನಿಟೈಜರ್ ಬಳಸಿ ಅಥವಾ ಸಾಬೂನು ಮತ್ತು ನೀರಿನಿಂದ) ಇವುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಉಗುಳದಂತೆ ಅಗತ್ಯ ಕ್ರಮ ವಹಿಸಿ ಅವರ ವರ್ತನೆಯಲ್ಲಿ ಬದಲಾವಣೆ ತರುವುದು.
3. ಬೀದಿ ಬದಿ ವ್ಯಾಪಾರಸ್ಥರು ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದು ಹಾಗೂ ಆಗಾಗ ಕೈಗಳನ್ನು ತೊಳೆಯುವುದನ್ನು ಪಾಲಿಸುವಂತೆ ಹಾಗೂ ಜನರೂ ಕೂಡ ಈ ನಿಯಮಗಳನ್ನು ಪಾಲಿಸುವಂತೆ ನಿಗಾವಹಿಸುವುದು.
4. ಸಾರ್ವಜನಿಕ ಸ್ಥಳಗಳಾದ ಬಸ್‌ನಿಲ್ದಾಣ, ಮಾರುಕಟ್ಟೆ ಪ್ರದೇಶ ಇತ್ಯಾದಿ ಸ್ಥಳಗಳಲ್ಲಿ ಕೈತೊಳೆದುಕೊಳ್ಳಲು ಹಾಗೂ ಜನರ ವರ್ತನೆಯಲ್ಲಿ ಬದಲಾವಣೆ ತರಲು ಸ್ಯಾನಿಟೈಜರ್/ ಸಾಬೂನು ಮತ್ತು ನೀರಿನ ವ್ಯವಸ್ಥೆ ಮಾಡುವುದು.

Scanned with CamScanner

ಗ್ರಾಮ ಪಂಚಾಯತಿಗಳು ಗ್ರಾಮ ಪಂಚಾಯತಿ ಕಾರ್ಯಪಡೆ ಮತ್ತು ಗ್ರಾಮ ಮಟ್ಟದ ಕಾರ್ಯಪಡೆ ಮೂಲಕ ಕಾರ್ಯನಿರ್ವಹಿಸಲು ಸ್ಥಳೀಯ ಸ್ವಯಂಸೇವಕರನ್ನು ಗುರುತಿಸಿ ಅವರಿಗೆ ಅಗತ್ಯ ತರಬೇತಿ, ಪ್ರೋತ್ಸಾಹ ನೀಡಲು ಗ್ರಾಮ ಪಂಚಾಯತಿಗಳಿಗೆ, ಆಯಾ ಜಿಲ್ಲೆಯ ಎನ್.ಜಿ.ಓ. ನೋಡಲ್ ಅಧಿಕಾರಿಗಳಿಗೆ ಮತ್ತು ಲೀಡ್ ಎನ್.ಜಿ.ಓ.ಗಳಿಗೆ ಸಹ ತಿಳಿಸಲಾಗಿರುತ್ತದೆ. ಕಾರಣ ಆರೋಗ್ಯವಂತ ಯುವಕ/ಯುವತಿ ಮತ್ತು ಸ್ವಸಹಾಯ ಸಂಘಗಳ ಪ್ರತಿನಿಧಿಗಳನ್ನು ಹಾಗೂ ಉಲ್ಲೇಖ (3)ರಲ್ಲಿ ತಿಳಿಸಿರುವಂತೆ ಮಾಜಿ ಗ್ರಾಮ ಪಂಚಾಯತಿ ಸದಸ್ಯರು ಕೊರೋನ ತಡೆಗಟ್ಟುವಿಕೆಯಲ್ಲಿ ಕಾರ್ಯನಿರ್ವಹಿಸಿದ್ದು, ಪ್ರಸ್ತುತ ಇವರ ಸೇವೆಯು ಕೂಡ ಗ್ರಾಮ ಪಂಚಾಯತಿಗಳಿಗೆ ಅತಿ ಸೂಕ್ತವಾಗಿರುವುದರಿಂದ, ಸ್ವಯಂ ಸೇವಕರಾಗಲು ಇಚ್ಛಿಸಿದಲ್ಲಿ ಅವರನ್ನು ಸ್ವಯಂ ಸೇವಕರಾಗಿ ಗುರುತಿಸಿ, ಗುರುತಿಸಲಾದ ಈ ಎಲ್ಲಾ ಸ್ವಯಂ ಸೇವಕರಿಗೆ ಕೂಡಲೇ ತರಬೇತಿಯನ್ನು ಕೈಗೊಂಡು ಈ ಮೇಲೆ ತಿಳಿಸಿರುವಂತೆ ಗ್ರಾಮ ಪಂಚಾಯತಿ ಸಮುದಾಯದ ಸಹಾಯವಾಣಿಗಳ (GP Call Center) ಮೂಲಕ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೋವಿಡ್-19 ಹರಡದಂತೆ ತಡೆಗಟ್ಟಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಮತ್ತು
ಸದಸ್ಯರು, ಕೋವಿಡ್-19ಗಾಗಿ ಖಾಸಗಿ ವಲಯ ಮತ್ತು
ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಸಂಘಟಿತ ಸಮಿತಿ

**ಇವರಿಗೆ:** ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ಜಿಲ್ಲಾ ಎನ್.ಜಿ.ಓ.ನೋಡಲ್ ಅಧಿಕಾರಿಗಳು ಮತ್ತು ಲೀಡ್ ಎನ್.ಜಿ.ಓ.ಗಳು
3. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
4. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಆಡಳಿತಾಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು.
5. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಹೆಚ್ಚುವರಿ ಪ್ರತಿ/ ಶಾಖಾ ರಕ್ಷಾ ಕಡತ.

**ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
3. ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾ.ಅ. & ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
6. ಸರ್ಕಾರದ ಕಾರ್ಯದರ್ಶಿಗಳು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.

Scanned with CamScanner